**ದಿನಾಂಕ:14-06-2022ರಂದು ಯೋಜನೆಯ "ನಿಯೋಜಿತ ಸ್ಥಳ" ಸೂಗುರು ಗ್ರಾಮ, ತಾ|| ಸುರಪುರ ಜಿ|| ಯಾದಗಿರಿಯಲ್ಲಿ ಬೆಳಗ್ಗೆ 11.00ಗಂಟೆಗೆ "ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಬೆಂಗಳೂರುರವರು ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್ ಇವರು ಸೂಗುರು ಮರಳು ಬ್ಲಾಕ್‌ನಲ್ಲಿ ಸಾಮಾನ್ಯ ಮರಳು ಗಣಿಗಾರಿಕೆ ಮಾಡಲು ಕೃಷ್ಣಾ ನದಿ ತೀರದ ಸರ್ವೆ ನಂ. 2 (p) to 12(p) ಸೂಗುರು ಗ್ರಾಮ, ಸುರಪುರ ತಾಲ್ಲೂಕು, ಯಾದಗಿರಿ ಜಿಲ್ಲೆಯಲ್ಲಿ ಒಟ್ಟು 50.00 ಎಕರೆ ಪ್ರದೇಶದಲ್ಲಿ ಪ್ರತಿ ವರ್ಷಕ್ಕೆ 1,87,936 ಟನ್ ಸಾಮರ್ಥ್ಯದ ಮರಳು ಗಣಿಕಾರಿಕೆಯನ್ನು ಅರೆ-ಯಾಂತ್ರಿಕೃತ ಪದ್ಧತಿಯ (ಓಪನ್ ಕಾಸ್ಟ್ ಮೈನಿಂಗ್) ಪ್ರಕಾರ ಸ್ಥಾಪಿಸಲು ಉದ್ದೇಶಿಸಿರುವುದಕ್ಕೆ ಯೋಜನೆಯನ್ನು ಅಭಿವೃದ್ಧಿಪಡಿಸಲು ಪ್ರಸ್ತಾಪಿಸಿರುವ ಯೋಜನೆಯಿಂದ ಪರಿಸರದ ಮೇಲೆ ಆಗುವ ಪರಿಣಾಮಗಳ ಕುರಿತು ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಲು ಜರುಗಿದ ಪರಿಸರ ಸಾರ್ವಜನಿಕ ಆಲಿಕ ಸಭೆಯ ನಡುವಳಿಗಳು:**

**<u>ಹಾಜರಿದ್ದ ಅಧಿಕಾರಿಗಳು :</u>**

**ಶ್ರೀಯುತರು:**

1) **ಶ್ರೀ. ಶಂಕರಗೌಡ ಸೋಮನಾಳ, ಕೆ.ಎ.ಎಸ್. (ಆಯ್ಕೆ ಶ್ರೇಣಿ)**
   **ಅಪರ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು, ಪರಿಸರ ಸಾರ್ವಜನಿಕ ಆಲಿಕೆ ಸಭೆ**
   **ಯಾದಗಿರಿ ಜಿಲ್ಲೆ, ಯಾದಗಿರಿ.**
2) **ಶ್ರೀ. ಮಧುಸೂದನ್,**
   **ಹಿರಯ ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಕಲಬುರಗಿ.**
3) **ಶ್ರೀ. ಕೆ.ರಾಜು, ಪರಿಸರ ಅಧಿಕಾರಿಗಳು,**
   **ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಯಾದಗಿರಿ**
4) **ಶ್ರೀ. ಸುಬ್ಬಣ್ಣ ಜಮಖಂಡಿ, ತಹಸೀಲ್ದಾರರು, ಸುರಪುರ**

*****

ಸಭೆಯ ಪ್ರಾರಂಭದಲ್ಲಿ ಶ್ರೀ ಕೆ. ರಾಜು, ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಯಾದಗಿರಿ ಇವರು ಮಾನ್ಯ ಅಪರ ಜಿಲ್ಲಾಧಿಕಾರಿಗಳು, ಯಾದಗಿರಿ ಇವರನ್ನು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳುವಂತೆ ವಿನಂತಿಸುತ್ತಾ ಸದರಿ ಸಭೆಗೆ ಆಗಮಿಸಿದ ಮಂಡಳಿಯ ಹಿರಿಯ ಪರಿಸರ ಅಧಿಕಾರಿಗಳು, ಕರಾಮಾನಿಮಂ, ಕಲಬುರಗಿ ಇವರನ್ನು ವೇದಿಕೆಯ ಮೇಲೆ ಆಸೀನರಾಗುವಂತೆ ಕೋರಿದರು ಹಾಗೂ ಕಂದಾಯ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ, ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್‌ನ ಎಲ್ಲಾ ಸಿಬ್ಬಂದಿಗಳಿಗೆ, ಯೋಜನೆಯ ತಾಂತ್ರಿಕ ಸಿಬ್ಬಂಧಿಗಳಿಗೆ, ಪೋಲಿಸ್ ಇಲಾಖಾ ಅಧಿಕಾರಿಗಳಿಗೆ, ಆರೋಗ್ಯ ಇಲಾಖೆ ಸಿಬ್ಬಂದಿಯವರಿಗೆ, ಮಾದ್ಯಮದವರಿಗೆ ಹಾಗೂ ಎಲ್ಲಾ ಸಾರ್ವಜನಿಕರಿಗೆ, ಸಮಸ್ತ ರೈತ ಬಾಂಧವರಿಗೆ ಮತ್ತು ಎಲ್ಲರಿಗೂ ಸ್ವಾಗತವನ್ನು ಕೋರಿದರು.

ಪರಿಸರ ಅಧಿಕಾರಿಗಳು, ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್ ಇವರು ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಸೂಗುರು ಮರಳು ಬ್ಲಾಕ್‌ನಲ್ಲಿ ಸಾಮಾನ್ಯ ಮರಳು ಗಣಿಗಾರಿಕೆ ಮಾಡಲು ಕೃಷ್ಣಾ ನದಿ ತೀರದ ಸರ್ವೆ ನಂ. 2 (p) to 12(p) ಸೂಗುರು ಗ್ರಾಮ, ಸುರಪುರ ತಾಲ್ಲೂಕು, ಯಾದಗಿರಿ ಜಿಲ್ಲೆಯಲ್ಲಿ ಒಟ್ಟು 58.00 ಎಕರೆ ಪ್ರದೇಶದಲ್ಲಿ ಪ್ರತಿ ವರ್ಷಕ್ಕೆ 1,93,783 ಟನ್ ಸಾಮರ್ಥ್ಯದ ಮರಳು ಗಣಿಕಾರಿಕೆಯನ್ನು ಅರೆ-ಯಾಂತ್ರಿಕೃತ ಪದ್ಧತಿಯ (ಓಪನ್ ಕಾಸ್ಟ್ ಮೈನಿಂಗ್) ಪ್ರಕಾರ ಸ್ಥಾಪಿಸಲು ಉದ್ದೇಶಿಸಿರುವುದಕ್ಕೆ ಯಾದಗಿರಿ ಜಿಲ್ಲೆಗೆ ಸಂಬಂಧಿಸಿದಂತೆ, ಪ್ರಸ್ತಾಪಿಸಿರುವ ಯೋಜನೆಯ ಕುರಿತಾದ ಹಾಗೂ ಪರಿಸರದ ಮೇಲೆ ಆಗುವ

ಪರಿಣಾಮಗಳ ಕುರಿತು ಸಾರ್ವಜನಿಕರಿಂದ ಅಹವಾಲುಗಳನ್ನು/ಸಲಹೆಗಳನ್ನು ಸ್ವೀಕರಿಸಲು, ದಿನಾಂಕ:14-06-2022ರಂದು "ಸರಕಾರಿ ಪ್ರೌಢ ಶಾಲೆ" ಹೆಮನೂರ ಗ್ರಾಮದಲ್ಲಿ, ಬೆಳಿಗ್ಗೆ 11.00ಗಂಟೆಗೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಆಯೋಜಿಸಲಾಗಿದೆ ಎಂದು ತಿಳಿಸುತ್ತಾ ಜಿಲ್ಲೆಯ ವಿವಿಧ ಕಛೇರಿಗಳಾದ ಜಿಲ್ಲಾಧಿಕಾರಿಗಳ ಕಛೇರಿ, ಯಾದಗಿರಿ, ಮುಖ್ಯ ಕಾರ್ಯನಿರ್ವಾಹಣ ಅಧಿಕಾರಿಗಳ ಕಾರ್ಯಾಲಯ ಜಿಲ್ಲಾ ಪಂಚಾಯತ್, ಯಾದಗಿರಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಯಾದಗಿರಿ, ತಾಲೂಕ ಕಾರ್ಯ ನಿರ್ವಾಹಕ ಅಧಿಕಾರಿಗಳು ತಾಲೂಕ ಪಂಚಾಯತ್ ಸುರಪುರ, ಜಿಲ್ಲಾ ಕೈಗಾರಿಕಾ ಕೇಂದ್ರ ಯಾದಗಿರಿ, ಗ್ರಾಮ ಪಂಚಾಯತಿ ಕಾರ್ಯಾಲಯ ಹೆಮನೂರ, ತಹಸೀಲ್ದಾರರು ಕಾರ್ಯಾಲಯ ಸುರಪುರ ಹಾಗೂ ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಯಾದಗಿರಿ ಇವರುಗಳ ಕಾರ್ಯಾಲಯದಲ್ಲಿ ಯೋಜನೆಯ ಕಾರ್ಯಕಾರಿ ಸಾರಾಂಶ (ಆಂಗ್ಲ ಮತ್ತು ಕನ್ನಡ ಭಾಷೆಗಳಲ್ಲಿ), ಅಡಕ ಮುದ್ರಿಕೆ ಮತ್ತು ವರದಿಗಳನ್ನು ಸಾರ್ವಜನಿಕರ ಪರಾಮರ್ಶೆಗಾಗಿ 30ದಿನಗಳ ಮುಂಚಿತವಾಗಿ ಇರಿಸಲಾಗಿತ್ತು ಎಂದು ತಿಳಿಸಿದರು ಹಾಗೂ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಅಧಿಸೂಚನೆಯನ್ನು ರಾಜ್ಯ ಮಟ್ಟದ ಪ್ರಮುಖ ದಿನ ಪತ್ರಿಕೆಗಳಾದ **"ವಿಜಯ ಕರ್ನಾಟಕ"** & **"ಡೆಕ್ಕನ ಹೆರಾಲ್ಡ"** ದಿ:15-05-2022ರಂದು ಹಾಗೂ ಸ್ಥಳೀಯ ದಿನಪತ್ರಿಕೆಯಾದ **"ಪ್ರಜಾವಾಣಿ"**ಯಲ್ಲಿ ದಿ:18-05-2022ರಂದು ಅಧಿಸೂಚನೆಯ ಪ್ರಕಟಣೆಯನ್ನು ನೀಡಲಾಗಿತ್ತು ಹಾಗೂ ಸಾರ್ವಜನಿಕರಿಂದ ಅಹವಾಲುಗಳನ್ನು ಅಹ್ವಾನಿಸಲಾಗಿತ್ತು ಎಂದು ತಿಳಿಸುತ್ತಾ, ಸಭೆಯನ್ನು ಜರುಗಿಸಲು ಅನುಮತಿಸಬೇಕೆಂದು ಮಾನ್ಯ ಅಧ್ಯಕ್ಷರಲ್ಲಿ ವಿನಂತಿಸಿದರು.

ಸಭೆಯ ಆಧ್ಯಕ್ಷರು ಸಭೆಯನ್ನು ಉದ್ದೇಶಿಸುತ್ತಾ ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್‌ನವರ ತಾಂತ್ರಿಕ ಸಲಹೆಗಾರರಿಗೆ ಉದ್ದೇಶಿತ ಯೋಜನೆಯ ತಾಂತ್ರಿಕ ವಿವರಗಳನ್ನು ಸಭೆಗೆ ಮಂಡಿಸುವಂತೆ ಸೂಚಿಸಿದರು. ಅದರಂತೆ, ಯೋಜನೆಯ ತಾಂತ್ರಿಕ ಸಲಹೆಗಾರರು ಯೋಜನೆಗೆ ಸಂಬಂಧಿಸಿದ ಅಂಶಗಳನ್ನು ಸಭೆಯಲ್ಲಿ ಮಂಡಿಸಿದರು.

ಸಭಾಧ್ಯಕ್ಷರು ಯೋಜನೆಯನ್ನು ಸಂಕ್ಷಿಪ್ತವಾಗಿ ಸಾರ್ವಜನಿಕರಿಗೆ ವಿವರಿಸಿ ಸಾರ್ವಜನಿಕರಲ್ಲಿ ಏನಾದರೂ ಸಲಹೆ, ಸೂಚನೆ, ಟೀಕೆ-ಟಿಪ್ಪಣಿ/ಅಹವಾಲುಗಳು ಇದ್ದಲ್ಲಿ ಮುಕ್ತವಾಗಿ ಲಿಖಿತ ರೂಪದಲ್ಲಾಗಲಿ ಅಥವಾ ಮೌಖಿಕವಾಗಿಯಾಗಲಿ ಸಭೆಯಲ್ಲಿ ಮಂಡಿಸುವಂತೆ ಹಾಗೂ ತಮ್ಮ ಅಭಿಪ್ರಾಯಗಳನ್ನು ವ್ಯಕ್ತ ಪಡಿಸುವಂತೆ ಸೂಚಿಸಿದರು.

ಅದರಂತೆ ಸಭೆಯಲ್ಲಿ ಹಾಜರಿದ್ದ ಈ ಕೆಳಕಂಡ ಗ್ರಾಮಸ್ಥರು ತಮ್ಮ ಅಭಿಪ್ರಾಯಗಳನ್ನು ಈ ಕೆಳಗಿನಂತೆ ವ್ಯಕ್ತ ಪಡಿಸಿದರು:

1. **ಶ್ರೀ ವೀರಭದ್ರ ಸೂಗುರು ಗ್ರಾಮ:-** ಇವರು ಮಾತನಾಡುತ್ತಾ ದನ-ಕರುಗಳಿಗೆ ತೊಂದರೆಯಾಗದಂತೆ ಎಚ್ಚರವಹಿಸಿ ಮರಳುಗಾರಿಕೆಯನ್ನು ಮಾಡಬಹುದೆಂದು ತಿಳಿಸಿದರು.

2. **ಶ್ರೀ ಶರಣಪ್ಪ ಸೂಗುರು ಗ್ರಾಮ:** ಇವರು ಮಾತನಾಡುತ್ತಾ ರಸ್ತೆಯಲ್ಲಿ ವಾಹನ ಚಲಿಸುವುದರಿಂದ ಗ್ರಾಮದಲ್ಲಿ ಧೂಳು ಆವರಿಸುತ್ತಿದ್ದು, ಇದಕ್ಕೆ ಮುಂಜಾಗ್ರತೆ ಕ್ರಮವನ್ನು ವಹಿಸಿ ಎಂದು ವಿನಂತಿಸಿದರು.
   - **ಯೋಜನೆದಾರರು ಮಾತನಾಡುತ್ತ ವಾಹನ ಚಲಿಸುವಾಗ ಪ್ರತಿ ಹಂತ-ಹಂತಹದಲ್ಲಿ ಕೂಡ ನೀರನ್ನು ಸಿಂಪರಣೆ ಮಾಡಿ ಮರಳುಗಾರಿಕೆಯನ್ನು ಮಾಡುತ್ತೆವೆ ಎಂದರು.**
   - **ಅಧ್ಯಕ್ಷರು ಮಾತನಾಡುತ್ತ ಜನರನ್ನು ಉದ್ದೇಶಿಸಿ ಶರಣಪ್ಪರವರ ಹೆಸರನ್ನು ಪ್ರಸ್ತಾಪಪಡಿಸಿ ರಸ್ತೆಯಲ್ಲಿ ನೀರನ್ನು ಸಿಂಪರಣೇ ಮಾಡಿ ಧೂಳು ಬರದ ಹಾಗೆ ಮತ್ತು ಸಾರ್ವಜನಿಕ ಆರೋಗ್ಯದ ಮೇಲೆ ಯಾವುದೇ ತೊಂದರೆಯಾಗದಂತೆ ಕ್ರಮ ವಹಿಸಲಾಗುವೆಂದು ತಿಳಿಸಿದರು.**

ಅಂತಿಮವಾಗಿ ಸಭಾಧ್ಯಕ್ಷರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಸಭೆಯಲ್ಲಿ ಈ ಯೋಜನೆಗೆ ಸಂಬಂಧಿಸಿದಂತೆ ವ್ಯಕ್ತವಾದ ಅನಿಸಿಕೆಗಳನ್ನು/ಅಭಿಪ್ರಾಯಗಳನ್ನು ಸಾರಾಂಶವನ್ನು ಮತ್ತೊಮ್ಮೆ ಸಭೆಗೆ ತಿಳಿಸುತ್ತಾ ಗ್ರಾಮದ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗದಂತೆ ಎಚ್ಚರ ವಹಿಸಲಾಗುವುದು ಎಂದು ತಿಳಿಸುತ್ತಾ ಸದರಿ ಸಭೆಯ ನಡುವಳಿಗಳೊಂದಿಗೆ ಯಥಾವತ್ತಾಗಿ ಬರೆದು ವಿಡಿಯೋ ಮತ್ತು ಛಾಯಾಚಿತ್ರಗಳೊಂದಿಗೆ ಮುಂದಿನ ಕ್ರಮಕ್ಕಾಗಿ ಸರಕಾರಕ್ಕೆ ಸಲ್ಲಿಸಲಾಗುವುದೆಂದು ಸಭೆಗೆ ತಿಳಿಸಿದರು.

ಶ್ರೀ ಶಂಕರಗೌಡ ಸೋಮನಾಳ
ಕೆ.ಎ.ಎಸ್. (ಆಯ್ಕೆ ಶ್ರೇಣಿ)
ಅಪರ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು
ಪರಿಸರ ಸಾರ್ವಜನಿಕ ಸಭೆ, ಯಾದಗಿರಿ
ತಾ|| & ಜಿ|| ಜಿಲ್ಲೆ ಯಾದಗಿರಿ.